


**ಬೊಳುವಾರು ಮಹಮದ್ ಕುಂಞಿ**

ಮೊನ್ನೆ ಪುಸ್ತಕಗಳ ಕಪಾಟುಗಳನ್ನು ಹೆಂಡತಿ ಸ್ವಚ್ಛಗೊಳಿಸುತ್ತಿದ್ದಳು. ಯಾವುದೋ ಒಂದು ಪುಸ್ತಕವನ್ನು ತೆಗೆದ ಜಾಗದಲ್ಲೇ ಇರಿಸದಿರುವುದನ್ನು ಕಂಡ ನಾನು, 'ಅದು ಹಾಗಲ್ಲ ಮಾರಾಯ್ತೀ ಹೀಗೆ' ಎಂದು ಹೇಳಿಬಿಟ್ಟಿದ್ದೆ. ತನ್ನ ಕೆಲಸವನ್ನು ಅರ್ಧಕ್ಕೇ ಕೈಬಿಟ್ಟು, 'ಹೇಗೆ ಕ್ಲೀನ್ ಮಾಡಿದ್ರೆ ನಿಮ್ಗೆ ಸರಿಕಾಣಿಸ್ತದೋ ಹಾಗೆ ಮಾಡಿಬಿಡಿ. ನೀವು ಗಂಡಸ್ರೆಲ್ಲ ಒಂದೇ ಜಾತಿಗೆ ಸೇರಿದವ್ರು. ನಾವು ಏನು ಮಾಡಿದ್ರೂ ನಿಮ್ಗೆ ತಪ್ಪು ಕಾಣಿಸ್ತದೆ. ಹೆಂಡ್ತಿಯೊಬ್ಳು ಗಂಡನಿಂದ ಎಲ್ಲಕ್ಕಿಂತ ಹೆಚ್ಚಾಗಿ ಬಯಸುವುದು ಏನೂಂತ ನಿಮ್ಗೆ ಗೊತ್ತಿದ್ರೆ ತಾನೆ?' ಎಂದು ಪ್ರಶ್ನಿಸಿದ್ದಳು. ಅವಳ ಪ್ರಶ್ನೆಗೆ ಉತ್ತರ ಹೊಳೆಯದಿದ್ದರೂ, ಆ ಮಾಟಗಾತಿಯ ನೆನಪಂತೂ ಆಗಿತ್ತು.

ಕರಿಕಲ್ಲುಗಳಿಂದ ಕಟ್ಟಿದ್ದ ಎತ್ತರದ ಆವರಣಗೋಡೆಯ ಮರೆಯಲ್ಲಿದ್ದ ವಿಶಾಲವಾದ ತೋಟದ ನಡುವೆಯಿದ್ದ ಆ ಮನೆಯ ಮರದ ಗೇಟು ಯಾವಾಗಲೂ ಮುಚ್ಚೆಯೇ ಇರುತ್ತಿತ್ತು. ಗೇಟಿನ ಹಲಗೆಗಳ ಸೆರೆಯಿಂದ ಕಣ್ಣು ತೂರಿಸಿ ನೋಡುವ ಧೈರ್ಯ ನಮಗಾರಿಗೂ ಇರಲಿಲ್ಲ. ಹಲಗೆಗಳ ಕಿಂಡಿಗಳಲ್ಲಿ ಮೂತಿ ತೂರುತ್ತಾ ಭುಸುಗುಟ್ಟುತ್ತಿದ್ದ ಏಳೆಂಟು ಭಯಾನಕ ನಾಯಿಗಳು ಅದಕ್ಕೆ ಒಂದು ಕಾರಣವಾದರೆ, ಅದಕ್ಕಿಂತಲೂ ದೊಡ್ಡ ಕಾರಣವೆಂದರೆ, ಕಣಿ ಹೇಳುವ ಆ ಜ್ಯೋತಿಷಿಣಿಯ ಬಗ್ಗೆ ವಾರಕ್ಕೆಂಟರಂತೆ ಹುಟ್ಟಿಕೊಳ್ಳುತ್ತಿದ್ದ ರೋಚಕ ಕತೆಗಳು.

ನಮ್ಮೂರವರಾರೂ ಗೇಟು ದಾಟಿ ಒಳಗೆ ಹೋದುದ್ದನ್ನು ನಾನು ಕಂಡಿಲ್ಲ. ಜ್ಯೋತಿಷ್ಯ ಕೇಳಲು ಬರುತ್ತಿದ್ದವರೆಲ್ಲ ಪರಊರಿಗರು; ಅದರಲ್ಲೂ



ಯತಿ ಸಿದ್ಧಕಟ್ಟೆ